

‘ದಂಡಿಗೆ ಹೆದರಲ್ಲ, ದಾಳಿಗೆ ಹೆದರಲ್ಲ, ತಟಕಪ್ಪ ಅಂದ್ರೆ ಮಾತ್ರಾ ಹೆದರಿ ಸಾಯೋ ಹಾಗಾಗುತ್ತೆ’ ಸೋರುವ ಮನೆಯಲ್ಲಿದ್ದ ಮುದುಕಿಯೊಬ್ಬಳು ಹೀಗೆ ತನ್ನಷ್ಟಕ್ಕೆ ಗೊಣಗುಟ್ಟಿಕೊಂಡಿದ್ದನ್ನು ಮನೆಯ ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ್ದ ಅವಳ ಹಸುವನ್ನು ಕದಿಯಲು ಬಂದ ಕಳ್ಳ, ಹಸುವನ್ನು ಎಳೆದೊಯ್ಯಲು ಹೊಂಚು ಹಾಕುತ್ತಿದ್ದ ಹೆಬ್ಬುಲಿ ಕೇಳಿಸಿಕೊಂಡಿದ್ದು, ತಟಕಪ್ಪನ ಹೆಸರಿಗೆ ಹೆದರಿದ್ದು, ಮುಂದೆ ಏನೇನಾಯ್ತು ಎನ್ನುವುದನ್ನು ರುಚಿಕಟ್ಟಾಗಿ ವಿವರಿಸುವ ಒಂದು ಜನಪದ ಕತೆ ಇದ್ದಕ್ಕಿದ್ದಂತೆ ನೆನಪಾಗಿದ್ದಕ್ಕೆ ಸಕಾರಣ ಉಂಟು. ‘ಶನಿ’ ಎನ್ನುವ ಅದೆಲ್ಲೋ ಇರುವ ಕಣ್ಣಿಗೆ ಕಾಣದ ಗ್ರಹಕ್ಕೆ ಒಂದು ಮಾನವ ರೂಪ ಕಲ್ಪಿಸಿ, ಮೇಷಾದಿ ದ್ವಾದಶ ರಾಶಿಗಳಲ್ಲಿ ಅವನು ಯಾವ ರಾಶಿಗೆ ಪ್ರವೇಶಿಸುತ್ತಾನೋ ಆ ರಾಶಿಗೆ ಮಾತ್ರವಲ್ಲ, ಅದರ ಹಿಂದುಮುಂದಿನ ರಾಶಿಗಳೂ ಸಾಡೇಸಾತಿಯ ದುಷ್ಪರಿಣಾಮಕ್ಕೆ ಒಳಗಾಗುವುದರ ಕುರಿತು ಜ್ಯೋತಿಷ್ಯ ಜ್ಞಾನವಿಲ್ಲದ ಜನಸಾಮಾನ್ಯರಿಗೂ ವಿಶೇಷ ತಿಳಿವಳಿಕೆ ಬಂದುಬಿಟ್ಟಿದೆ. ‘ತಮ್ಮ ರಾಶಿ ಯಾವುದು?’ ಎನ್ನುವ ಪ್ರಾಥಮಿಕ ಜ್ಞಾನ ಇದ್ದರೆ ಸಾಕು, ಯಾವ್ಯಾವ ರಾಶಿಗೆ ಶನಿ ಏನೇನು ಕೋಟಲೆ ಕೊಡುತ್ತಾನೆನ್ನುವುದರ ಕುರಿತು ಟೀವಿ ಚಾನಲ್‌ಗಳಲ್ಲಿ ದಿನವಿಡೀ ಕಾರ್ಯಕ್ರಮಗಳು, ಪರಿಹಾರಗಳು, ನಂತರದ ಭವಿಷ್ಯ ಮುಂತಾದುವುಗಳು ಚರ್ಚೆಯಾಗುತ್ತವೆ. ಭವಿಷ್ಯ ನಂಬದವನ ಕಿವಿಯೂ ನೆಟ್ಟಗಾಗಿ ಒಳ್ಳೆಯ ಭವಿಷ್ಯ ಕಿವಿಗಳ ಮೇಲೆ ಬಿದ್ದರೆ ಒಂಥರದ ಸಮಾಧಾನ. ಕೆಟ್ಟದ್ದಾಗಿದ್ದರೆ ಹೊಟ್ಟೆಯೊಳಗೆ ಪುಕುಪುಕು. ಪುಣ್ಯಾತ್ಮ ಶನಿಮಹಾರಾಯ, ಅಥವಾ ಪಾಪಾತ್ಮ ಎಂದರೆ ಹೆಚ್ಚು ಸಮಂಜಸವಾಗುತ್ತದೆಯಾ, ತಾನಿರುವ ಮತ್ತು ಅದರ ಹಿಂದುಮುಂದಿನ ರಾಶಿಗಳನ್ನು ಕಾಡಿಸಿದರೆ ಅದೊಂದು ವಿಧ. ಪರಪೀಡಕನಾದವನು ನಡುಮನೆಯಲ್ಲಿದ್ದರೆ ಆಚೀಚಿನ ಮನೆಯವರಿಗೆ ತಲೆಬೇನೆ ತಪ್ಪಿದ್ದಲ್ಲ ಅನ್ನುವಂತೆ ಏನೋ ಒಂದು ಕಿತಾಪತಿ ಮಾಡಿ ವಿಕೃತ ಸಂತೋಷ ಅನುಭವಿಸುತ್ತಾನೆ ಅನ್ನಬಹುದು. ಈ ಶನಿ ಹಾಗೂ ಅಲ್ಲ. ಜಾತಕದಲ್ಲಿ ಅವನು ಶುಭಸ್ಥಾನದಲ್ಲಿದ್ದರೆ ಹೆಚ್ಚು ಕಾಟ ಕೊಡುವುದಿಲ್ಲ ಎನ್ನುವ ಹೇಳಿಕೆ ಮಾತಿದ್ದರೂ ಅವನು ಯಾವ ರಾಶಿಯಿಂದ ಯಾವ ರಾಶಿಗೆ ಕಾಲಿಟ್ಟ ಅನ್ನುವುದು ಪ್ರಮುಖ ಕಾರಣವಾಗಿ ಶನಿ ಹೊಕ್ಕ ರಾಶಿಯವರು ಆತಂಕಕ್ಕೆ ಒಳಗಾಗುತ್ತಾರೆ. ಹೀಗೆ ಆತಂಕ ಪಡಿಸುವುದೂ ಕೂಡಾ ಶನಿ ಹಿಡಿದದ್ದರ ಪರಿಣಾಮ ಸ್ವರೂಪದ ಒಂದು ಸೂಚನೆಯಾಗಿರಬಹುದು ಎಂಬುದನ್ನು ಜಾತಕ, ಜ್ಯೋತಿಷ್ಯ ನಂಬದವರು ಸಾರಾಸಗಟಾಗಿ ಅಲ್ಲಗಳೆಯಬಹುದು. ಆ ಹಕ್ಕು ಅವರಿಗಿದೆ. ಅವರವರ ನಂಬಿಕೆ ಅವರವರದ್ದು. ಅದನ್ನು ಪ್ರಶ್ನಿಸುವುದು, ಅಥವಾ ಹೀಗಳೆಯುವುದು ನನ್ನ ಲೇಖನದ ಉದ್ದೇಶ ಅಲ್ಲ. ಶನಿಗೆ, ಅವನ ವಾಹನಕ್ಕೆ, ನಂಬುವ ಜನ ಯಾವ ಪರಿ ಹೆದರುತ್ತಾರೆನ್ನುವುದನ್ನು ಹಂಚಿಕೊಳ್ಳುವುದಷ್ಟಕ್ಕೆ ಈ ಲೇಖನ ಸೀಮಿತ. ಮೊದಲು ಹೇಳಿದ ವಿಷಯಕ್ಕೆ ಬರುತ್ತೇನೆ. ಶನಿ ಕಾಲಿಟ್ಟ ರಾಶಿಯಿಂದ ನಾಲ್ಕನೆಯ ಮನೆಗೆ ಅರ್ಧಾಷ್ಟಮ ಶನಿ. ಐದನೆಯದಕ್ಕೆ ಪಂಚಮ ಶನಿ. ‘ಪಂಚಮ ಶನಿ ಹೆಂಚಿನಲ್ಲಿ ನೀರು ಕುಡಿಸ್ತಾನೆ’ ಎನ್ನುವ ನಂಬಿಕೆ ಶ್ರದ್ಧಾಳುಗಳಲ್ಲಿ ನಡುಕ ಹುಟ್ಟಿಸುವಂತೆ ಪ್ರಚಲಿತದಲ್ಲಿದೆ. ಇನ್ನು ಶನಿ ಇದ್ದಲ್ಲಿಂದ ಎಂಟನೆಯ ರಾಶಿಯವರಿಗೆ ಅಷ್ಟಮ ಶನಿ. ಮೊದಲೇ ಹೇಳಿದಂತೆ ಅವನಿರುವ ಹಿಂದುಮುಂದಿನ ರಾಶಿಯವರಿಗೆ ಸಾಡೇಸಾತಿ. ಶನೇಶ್ವರ ಅಂದರೆ ಮಂದವಾಗಿ ಚಲಿಸುವವನು ಎನ್ನುವ ಅರ್ಥ. ಒಂದೊಂದು ರಾಶಿಯಲ್ಲಿ ಎರಡೂವರೆ ವರ್ಷ ಹಾಯಾಗಿ ಠಿಕಾಣಿ ಹೂಡುವುದು ಅವನ ಜಾಯಮಾನ. ಹಿಂದೊಂದು ಕಾಲದಲ್ಲಿ ಈ ಶನಿ ಮಹರಾಯ ಯಾವ ರಾಶಿಗೆ ವಕ್ಕರಿಸಿದ್ದಾನೆ ಎನ್ನುವ ಕುರಿತು ತಂತಮ್ಮ ಜಾತಕವನ್ನು ಆಸಕ್ತರು ಶಾಸ್ತ್ರ ಹೇಳುವ ಪಂಡಿತರಿಗೆ ತೋರಿಸಿ